ಎ.ಕೆ. ಪಟ್ಟಾಭಿ, ಬೆಂಗಳೂರು

ಶಬರಿಮಲೆಗೆ ಗಡ್ಡಬಿಟ್ಟು ಹೋದರೆ ಪಾಪ ಹೋಗುತ್ತದಂತೆ. ಅಕಸ್ಮಾತ್ ಹೋತವೊಂದು ಅಲ್ಲಿಗೆ ಹೋದರೆ?



ಪಾಪವಷ್ಟೇ ಅಲ್ಲ, ಹೋತವೇ ಹೋಗಿಬಿಡುತ್ತದೆ ಬೆಟ್ಟ ಇಳಿದ ಭಕ್ತರಲ್ಲಿ ಹಲವರು ಸರ್ವಭಕ್ಷಕರು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

◆ ಹೆಣ್ಣನ್ನು ಮಾಯೆ ಎನ್ನಲು ಕಾರಣವೇನು ರಾಮ್‌ಜೀ?

ಮಕ್ಕಳು ಮಾ ಎಂದು, ಗಂಡ ಏ ಎಂದು ಕರೆಯುವುದರಿಂದ.

ರತ್ನಜ, ಮೈಸೂರು

◆ ಪತಿ ದೇವರಾದರೆ ಸತಿ ಏನು?

ಆ ದೇವರನ್ನು ಮೂಲೆ ಮುಡುಕುಗಳಲ್ಲಿ ಹುಡುಕುತ್ತಾ ಕೀರುತನೆ ಹಾಡುವ ಅರಚಕಿ!

ಮುಕುಂದ ಹೆರಕಲ್ಲ, ಕಲಬುರ್ಗಿ

◆ ಮೊದಲ ಬಾರಿ ಗಡಿಯಾರ ಕಂಡುಹಿಡಿದಾಗ ವೇಳೆ ಎಷ್ಟು ಆಗಿತ್ತು? ಹಗಲೋ ಅಥವಾ ರಾತ್ರಿಯೋ?



ಬೆಳಿಗ್ಗೆ 10 ಗಂಟೆ 10 ನಿಮಿಷವಾಗಿತ್ತಂತೆ. ಅದಕ್ಕೇ ಆ ವೇಳೆಯನ್ನೇ ಎಲ್ಲ ಜಾಹೀರಾತುಗಳಲ್ಲೂ ತೋರುವುದಂತೆ.

ಡಾ. ವಿ. ಪುಗಳೇಂದಿ, ಬಳ್ಳಾರಿ

◆ ಹೇರ್ ಕಟಿಂಗ್ ಶಾಪ್‌ಗಳಲ್ಲಿ ಅರ್ಧಕ್ಷೌರ ಮಾಡಿಸಿಕೊಂಡು, ನಡುವೆ ಅರ್ಧ ಗಂಟೆ ಸೆಲ್ಫೋನಲ್ಲಿ ಮಾತನಾಡುವರಲ್ಲಾ...?

ಸೆಮಿಕಟಿಂಗ್ ಸ್ಟೇಜಿನ ಸೆಲ್ಫಿ ಹಂಚಿಕೊಳ್ಳಬೇಕಲ್ಲ! ಸೆಲ್ಲಾತುರಾಣಾಂ ನ ಟೈಮ್ ಸೆನ್ಸ್, ನ ಕಾಮನ್ ಸೆನ್ಸ್.

ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಸಾಲುಮರದ ತಿಮ್ಮಕ್ಕನಿಗೂ, ತಿರುಪತಿ ತಿಮ್ಮಪ್ಪನಿಗೂ ಏನು ವ್ಯತ್ಯಾಸ?

ಒಂದೇ ಅಕ್ಷರ ವ್ಯತ್ಯಾಸ; ಈಕೆಯದು ಮರ ರಕ್ಷಣೆ, ಅವನದು ನರ ರಕ್ಷಣೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

◆ ಪ್ರಾಣಿಗಳಿಗೂ ಮತ ಚಲಾಯಿಸುವ ಹಕ್ಕು ಇದ್ದಿದ್ದರೆ ಚುನಾವಣೆಗಳು ಹೇಗಿರುತ್ತಿದ್ದವು ರಾಮ್?

ಬಾಡೂಟಕ್ಕೆ ತಮ್ಮನ್ನು ಬಳಸುವವರ ವಿರುದ್ಧ ಅವು ಮತ ಹಾಕುತ್ತಿದ್ದುದರಿಂದ ಸಸ್ಯಾಹಾರಿಗಳೇ ಗೆಲ್ಲುತ್ತಿದ್ದರು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

◆ ಉಸಿರಿನ ಬೆಲೆಯ ಅರಿವಾಗುವುದು ಯಾವಾಗ?

ನರ್ಸಿಂಗ್‌ಹೋಂನಲ್ಲಿ ಏದುಸಿರು ಬಿಡುತ್ತಾ ಮಲಗಿರುವಾಗ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಹೆಣ್ಣಿನ ಕಣ್ಣೀರಿಗೆ ಏಕೆ ಬರ ಇಲ್ಲ?

ಹೆಣ್ಣು ಸುಮ್ಮನಿದ್ದರೂ ಗೋಳು ಸೀರಿಯಲ್‌ಗಳು ಕರುಳನ್ನೇ ಹಿಂಡಿ ಕಣ್ಣೀರನ್ನು ಸ್ಫುರಿಸುತ್ತವಂತೆ.

ಗಾಯತ್ರಿ ವಿಜಯಕುಮಾರ್, ದಾವಣಗೆರೆ

◆ ಸಿನಿಮಾ/ಧಾರಾವಾಹಿಗಳಲ್ಲಿ ಪೂಜೆ ಮಾಡಿದಾಕ್ಷಣ ಹೂವಿನ ಪ್ರಸಾದ ಕೊಡುವ ದೇವ ನಿಜಜೀವನದಲ್ಲೇಕೆ ಕೊಡುವುದಿಲ್ಲ?

ನಿಜಜೀವನದಲ್ಲಿ ಕೂಡಲೆ ಬೀಳುವಂತೆ ಹೂವನ್ನು ಜೋಡಿಸುವುದಿಲ್ಲವಲ್ಲ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

◆ ಮಹಲಿನಂತಹ ಅದ್ದೂರಿ ಮನೆ ಕಟ್ಟಿಸಿ ಮನೆಗೆ 'ಸುಖವಿಲ್ಲಾ' ಎಂದೇಕೆ ಹೆಸರು ಇಟ್ಟಿರುತ್ತಾರೆ?

ಭರ್ಜರಿ ಬಂಗಲೆ ಕಂಡು ಎಂದು ರೈಡ್ ಮಾಡುವರೋ ಎಂಬ ಚಿಂತೆಯಲ್ಲಿ ಸುಖ ಇರುವುದಿಲ್ಲವಂತೆ.

ಅಮರಯ್ಯಾ ಪತ್ರಿಮಠ, ಸುರಪುರ

◆ ಗಡಿಯಾರದಿಂದ ನಾವು ಕಲಿಯಬೇಕಾದ ಪಾಠವೇನು?

ಹಾದಿ ಮುಳ್ಳಿನದಾದರೂ ಛಲದಿಂದ ಮುಂದುವರಿದರೆ ಕಾಲ ಕೂಡಿಬರುತ್ತದೆ ಎಂದು.

## ಬಹುಮಾನಿತ ಪ್ರಶ್ನೆ

ಅನಂತಪದ್ಮನಾಭ ಎಚ್.ಎಂ. ಮೈಸೂರು

◆ ಗೃಹಮಂತ್ರಿ ಗಂಡು, ಅರ್ಥಮಂತ್ರಿ ಹೆಣ್ಣು. ಹೀಗೇಕೆ?

ಇದರಲ್ಲೇನಚ್ಚರಿ? ಸಂಸಾರದ ಸಮ್ಮತ ಪದ್ಧತಿ ಸರ್ಕಾರಕ್ಕೆ ವಿಸ್ತಾರವಾಗಿದೆ ಅಷ್ಟೆ!

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

◆ ರಾಜಕಾರಣಿಯನ್ನು ಯಾವ ಮಾನದಂಡದಲ್ಲಿ ಅಳೆಯುವುದು ಸಾರ್?

ಎಷ್ಟು ಜನರ ಮಾನ ಹಾಳಾಗಿಸಿದ್ದಾನೆ, ಎಷ್ಟು ದಂಡವಾಗಿ ಬದುಕಿದ್ದಾನೆ ಎಂಬುದರ ಮೇಲೆ.

ಸುಲೋಚನಾ ವಾದಿರಾಜ್ ಹೊಳೆಹೊನ್ನೂರು

◆ ಕಣ್ಣೀರು ಹರಿಸುವುದರಿಂದ ಏನು ಸಿಗಬಹುದು ರಾಮ್‌ಜೀ?

ಯಾರು? ಗಂಡಾದರೆ ಛೀಮಾರಿ, ಹೆಣ್ಣಾದರೆ ಹಲವು ಗಂಡುಗಳ ಭುಜ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

◆ ಪ್ರೇಮಲೋಕ ಕಟ್ಟಲು ಎಷ್ಟು ಖರ್ಚಾಗುತ್ತದೆ?



ಹತ್ತು ರೂಪಾಯಿ! ಬೀಚಿನಲ್ಲಿ ಕಡಲೆಕಾಯಿ ಖರ್ಚಿನಲ್ಲೇ ಪ್ರೇಮಿಗಳು ಭರ್ಜರಿ ಪ್ರೇಮಲೋಕ ಕಟ್ಟಬಲ್ಲರು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

◆ ನೀವು ನೀಡುವ ಉತ್ತರಗಳು ಒಮ್ಮೊಮ್ಮೆ 'ಸ್ಲೋಗನ್' ರೀತಿ ಇರುತ್ತವಲ್ಲಾ ಶ್ರೀರಾಮ್?

ನಿಜ. ಏಟಾಗುವ ಗುಂಡಿಕ್ಕುವ ಗನ್ ಫಾಸ್ಟ್ ಗನ್. ಕಚಗುಳಿಯ ಗುಂಡಿಕ್ಕುವ ಗನ್ ಸ್ಲೋ ಗನ್ನೇ.

ಆರ್. ಮಧುಸೂದನ್, ಹಾಸನ

◆ ಅಷ್ಟೊಂದು ಸೌಂದರ್ಯಪ್ರಜ್ಞೆ ಇರುವ ಹೆಣ್ಣು ತಲೆಕೂದಲನ್ನು ಬಾಚಣಿಗೆಯಲ್ಲಿ ಬಿಡುವುದೇಕೆ?

ಅದು ಅವಳು ಬಿಡುವುದಲ್ಲವಂತೆ. ಬಾಚಣಿಗೆಯೇ ಕೂದಲಿನ ಸೌಂದರ್ಯಕ್ಕೆ ಮಾರುಹೋಗಿ ಕಿತ್ತು ಇರಿಸಿಕೊಳ್ಳುವುದಂತೆ.

■ ರಾಮ್